

# ಬಾಲಿಯ ಚೆಲುವೂ ನೃತ್ಯದ ಲಯವೂ...

ಸೂರ್ಯಾಸ್ತದ ಚೆಲುವನ್ನು ಕಣ್ತುಂಬಿಕೊಳ್ಳುತ್ತಾ ಬಾಲಿಯ ವಿಶಿಷ್ಟ ನೃತ್ಯ ಪ್ರಕಾರಕ್ಕೆ ಸಾಕ್ಷಿಯಾಗುವ ಗಳಿಗೆ ಅವಿಸ್ಮರಣೀಯ.

■ **ಶಾಂತಾ ಜಯಾನಂದ್**



ನೀಲಾಗಸದ ಚೆಲುವನ್ನು ಪ್ರತಿಬಿಂಬಿಸುವ ಸುಂದರ ಕಡಲ ತೀರಗಳು, ಚಿತ್ತಾಪಹರಿಸುವ ದ್ವೀಪಗಳು, ಬಿರಿಬಿರಿ ಬಿಸಿಲಲ್ಲೂ ಹಸುರು ತುಂಬಿ ನಳನಳಿಸುವ ಕಾಡುಗಳು, ಜೀವಕ್ಕೆ ಚೈತನ್ಯ ನೀಡುವ ದೇವಸ್ಥಾನಗಳ ಸುಂದರ ವಿನ್ಯಾಸಗಳು... ಇಂಡೋನೇಷ್ಯಾದ ಬಾಲಿ ಎನ್ನುತ್ತಿದ್ದಂತೆ ಕಣ್ಮನ ಆವರಿಸಿಕೊಳ್ಳುವ ದೃಶ್ಯಗಳಿವು. ಇದರೊಂದಿಗೆ ಬಾಲಿಯನ್ನು ಸುಂದರವಾಗಿಸಿರುವ ಮತ್ತೂ ಒಂದು ಸಂಗತಿ ಇದೆ. ಅದೇ ಇಲ್ಲಿನ ವಿಶಿಷ್ಟ ನೃತ್ಯ ಪ್ರಕಾರ.

ಇಲ್ಲಿನ ಪಿಕಾಟು (Pecatu)ವಿನ ಉಲುವಾಟು ಎಂಬಲ್ಲಿ ವಿಶ್ವಪ್ರಸಿದ್ಧವಾದ 'ಕಿಕ್ಯಾಕ್ ಫೈರ್ ಡ್ಯಾನ್ಸ್' (Kecak and fire Dance) ಎಂಬ ವಿಶಿಷ್ಟ ನೃತ್ಯಪ್ರಕಾರದ ಬಗ್ಗೆ ನಮ್ಮ ಮಾರ್ಗದರ್ಶಿಯಿಂದ ತಿಳಿದ ನಾವು, ಮಧ್ಯಾಹ್ನದ ಉರಿಬಿಸಿಲಿನಲ್ಲಿ ಉಲುವಾಟು ದೇಗುಲ ನೋಡಲು ಹೊರಟೆವು. ಅದಾಗಲೇ ಬಾಲಿಯಲ್ಲಿ ಮೂರು ದಿನಗಳಿಂದ ನಡೆದು ನಡೆದು ಸುಸ್ತಾಗಿ ಜೀವಮಾನದಲ್ಲಿ ಹರಿಸದಷ್ಟು ಬೆವರನ್ನು ಹರಿಸಿದ್ದೆವು. ಅಂಥ ಬಿಸಿಲಿನ ತಾಪದ ನಡುವೆಯೇ ದೇವಸ್ಥಾನದ ಮೆಟ್ಟಿಲುಗಳನ್ನು ಏರಲಾರಂಭಿಸಿದೆವು.

ಅದು ಒಂದು ಪಾರಂಪರಿಕ ದೇಗುಲ. ಅಲ್ಲಿ ಯಾವ ಮೂರ್ತಿಯ ದರ್ಶನವೂ ಇಲ್ಲ. ಆದರೆ ಅಲ್ಲಿ ನಿಂತು ನೋಡಿದರೆ ಸುತ್ತಲೂ ಕಾಣುವ ಚಂದದ ಕಡಲು, ಹಸಿರು, ಬೆಟ್ಟ... ನೋಡಿದಷ್ಟು ತಣಿಯದ ವಿಹಂಗಮ ನೋಟ ದಕ್ಕುತ್ತದೆ. ಪ್ರಕೃತಿಗಿಂತ ಬೇರೆ ದೇವರುಂಟೆ? ಇದೇ ಕಾರಣಕ್ಕೇ ಬಾಲಿಯನ್ನು 'ಐಲ್ಯಾಂಡ್ ಆಫ್ ಗಾಡ್' ಎಂದು ಕರೆದಿರಬಹುದೇನೋ? ಬಾಲಿಯ ಯಾವ ದೇವಾಲಯದಲ್ಲೂ ದೇವತಾ ಮೂರ್ತಿಯ ದರ್ಶನವಿಲ್ಲ. ಆದರೆ ಆ